# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


CIN:U40109KA2004SGC035177
ನೋಂದಾಯಿತ ಕಛೇರಿ ವಿಳಾಸ:
ನಿಗಮ ಕಾರ್ಯಾಲಯ,
ವಿಜಯನಗರ 2ನೇ ಹಂತ,
ಹಿನ್‌ಕಲ್, ಮೈಸೂರು
Web site: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ
ಚಾ.ವಿ.ಸ.ನಿ.ನಿ., ಕುವೆಂಪುನಗರ ಉಪವಿಭಾಗ,
ಗಗನಚುಂಬಿ ಜೋಡಿರಸ್ತೆ, ಮೈಸೂರು.
ದೂರವಾಣಿ ಸಂಖ್ಯೆ: 2560803
ಮೊಬೈಲ್: 9448994743.
E-mail: aeekmp1@cescmysore.org


ಸಂಖ್ಯೆ: ಸ:ಕಾ.ನಿ.ಇಂ(ವಿ)/ಸ.ಇಂ(ತಾಂ)/ಕು.ನ/ಉ.ವಿ/2019-20/ 348.　　　　ದಿನಾಂಕ: 19-6.2020

## ಸಭಾ ನಡಾವಳಿ

ದಿನಾಂಕ: 17-06-2020 ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ವಿ.ವಿ.ಮೊಹಲ್ಲ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಈ ಕೆಳಕಂಡ ಅಧಿಕಾರಿಗಳು/ಗ್ರಾಹಕರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

**ಅಧಿಕಾರಿಗಳು:**

ಶ್ರೀ/ಶ್ರೀಮತಿ

| | | |
|---|---|---|
| 1. | ಚಿಕ್ಕಸಿದ್ದೇಗೌಡ, | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು |
| 2. | ವಿ. ದೀಪಕ್, | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು. |
| 3. | ಮಧುಸೂದನ ಎಸ್.ಕೆ, | ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ |
| 4. | ವೀಣಾ.ಆರ್ | ಸಹಾಯಕ ಇಂಜಿನಿಯರ್(ತಾಂತ್ರಿಕ) |
| 5. | ಆರ್. ಮದನ್ | ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ |
| 6. | ಕೆ.ವಿ. ಮುರಳಿ | ಸಹಾಯಕ ಇಂಜಿನಿಯರ್(ವಿ), ನಿವೇದಿತ ಶಾಖೆ |
| 7. | ಬಿ.ಬಿ. ಶಿವಣ್ಣ | ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ |
| 8. | ಶಿವಾನಂದ ಟಿ.ಕೆ | ಕಿರಿಯ ಇಂಜಿನಿಯರ್(ವಿ), ನಿವೇದಿತ ಶಾಖೆ |
| 9. | ಹರ್ಷವರ್ಧನ್, | ಕಿರಿಯ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ |
| 10. | ಜಗದೀಶ್, | ಕಿರಿಯ ಇಂಜಿನಿಯರ್(ವಿ), ಅರವಿಂದ ಶಾಖೆ |

**ಗ್ರಾಹಕರು/ ವಿದ್ಯುತ್ ಗುತ್ತಿಗೆದಾರರು**

1. ಶ್ರೀ ಎ.ಎಂ. ನಟೇಶ್
2. ಶ್ರೀ ಅಶ್ವಥ್‌ನಾರಾಯಣ.ಸಿ.ಆರ್
3. ಶ್ರೀ ನಾಗರಾಜು.ಬಿ.ಎಸ್
4. ಶ್ರೀ ಅನಿಲ್ ಸ್ಟೀಪೆನ್ಸ್‌ಸನ್

ಮೊದಲಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned by CamScanner

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರು/ಗುತ್ತಿಗೆದಾರರು ಭಾಗವಹಿಸಿದ್ದು, ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು | ತಿಳಿಸಿದ ಸಮಸ್ಯೆ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ನಾಗರಾಜು.ಬಿ.ಎಸ್ ವಿದ್ಯುತ್ ಗುತ್ತಿಗೆದಾರರು | 1.ತಾತ್ಕಾಲಿಕ ಸ್ಥಾವರಗಳ ಡೆಪಾಸಿಟ್ ಪಾವತಿ ತಡವಾಗುವ ಬಗ್ಗೆ.<br>2. ಮಾಪಕಗಳ ಲಭ್ಯತೆ ಕಡಿಮೆಯಾಗಿರುತ್ತದೆ. | 1. ಕಾ.ನಿ.ಇಂ(ವಿ) ರವರು ಸಂಬಂಧಪಟ್ಟ ಗ್ರಾಹಕರ ಆರ್.ಆರ್. ಸಂಖ್ಯೆಗೆ ಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಲಾಯಿತು. ಹಾಗೂ ಅರ್ಜಿನೀಡಿದ 60 ದಿನಗಳು ಒಳಗಾಗಿ ಚೆಕ್ ನೀಡಲಾಗುವುದು ಎಂದು ತಿಳಿಸಿದರು.<br>2. ಕಾ.ನಿ.ಇಂ(ವಿ) ರವರು ಒಂದು ವಾರದ ಒಳಗಾಗಿ ಮಾಪಕದ ಕೊರತೆಯನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು. |
| 2 | ಶ್ರೀ ಅಶ್ವಥ್‌ನಾರಾಯಣ್ ವಿದ್ಯುತ್ ಗುತ್ತಿಗೆದಾರರು | 1. ಜ್ಞಾನ ಗಂಗಾ ಬಡಾವಣೆ ಕೊಪ್ಪಲೂರುಗೆ ಹೊಸ ಫೀಡರ್ ನ ಮೂಲಕ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ.<br>2. ಕಂದಾಯ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ನೀಡುವಾಗ ಸ್ವಯಂ ನಿರ್ವಾಹಣಾ ಕಾಮಗಾರಿಯಡಿಯಲ್ಲಿ ಕಂಬಗಳನ್ನು ಅಳವಡಿಸುವಾಗ ಗ್ರಾಹಕರ ಒಪ್ಪಿಗೆ ಪತ್ರ ಮತ್ತು TAQC ಯನ್ನು ಪಡೆಯುವ ಬಗ್ಗೆ ತಿಳಿಸಿದರು.. | 1. ಕಾ.ನಿ.ಇಂ(ವಿ) ರವರು ಸದರಿಯವರಿಗೆ ಫೀಡರ್ ಅಳವಡಿಸಲು ಮೂರು ತಿಂಗಳ ಕಾಲಾವಕಾಶವನ್ನು ನೀಡಿ ಪತ್ರವನ್ನು ಬರೆಯಲು ತಿಳಿಸಿದರು.<br>2. ಸದರಿಯವರ ಸೂಚನೆಗಳನ್ನು ನಿಗಮದ ನಿಯಮಾನುಸಾರ ಪಾಲಿಸಲಾಗುವುದು. ಎಂದು ತಿಳಿಸಲಾಯಿತು. |
| 3 | ಶ್ರೀ ಅನಿಲ್ ಸ್ಟೀಫೆನ್ಸ್‌ಸನ್ ಗ್ರಾಹಕರು | ಸಿ.ಎಸ್.ಎಂ ಪಬ್ಲಿಕ್ ಸ್ಕೂಲ್, ಮಹದೇವಪುರ ಹತ್ತಿರ ರಸ್ತೆಯ ಮಧ್ಯ ಕಂಬ ಇರುವುದನ್ನು ತೆರವುಗೊಳಿಸಲು ಕೋರಿದರು. | ಕಾ.ನಿ.ಇಂ(ವಿ) ರವರು ಒಂದು ವಾರದ ಒಳಗಾಗಿ ಕಂಬವನ್ನು ಸ್ಥಳಾಂತರಿಸಲು ಶಾಖಾಧಿಕಾರಿಗಳಿಗೆ ಸೂಚಿಸದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ರವರು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದರು.

1. ಕುವೆಂಪುನಗರ ಉಪವಿಭಾಗದ ಶಾಲಾ/ಕಾಲೇಜುಗಳ ಮೇಲೆ ಹಾದುಹೋಗಿರುವ ಎಲ್.ಟಿ/ ಹೆಚ್.ಟಿ ವಿದ್ಯುತ್ ಮಾರ್ಗಗಳು ಇದ್ದರೆ ಸ್ಥಳಾಂತರಿಸಲು ಸೂಚಿಸಿದರು.

2. ಚೆಕ್ ಡ್ರಾಪ್ ಬಾಕ್ಸ್‌ನಲ್ಲಿ ಹಾಕುವ ರೆವಿನ್ಯೂ ಡ್ರೈವ್ ಮೂಲಕ ವಸೂಲಿ ಮಾಡುವ ಹಣವನ್ನು ನಗದು ಕೌಂಟರ್‌ನಲ್ಲಿಯೇ ರಶೀದಿ ಹಾಕಲು ಸೂಚಿಸಿದರು.

3. ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ಕಂಚಿಣದ ಕಂಬಗಳು/TC Structure ಇದ್ದಲ್ಲಿ ತೆರವುಗೊಳಿಸಿ ಕೂಡಲೇ ಆರ್.ಸಿ.ಸಿ ಕಂಬಗಳನ್ನು ಅಳವಡಿಸಲು ಸೂಚಿಸಿದರು.

4. ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ಬಳಕೆಯಾಗದಿರುವ ಪರಿವರ್ತಕಗಳು ಇದ್ದಲ್ಲಿ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳಲು ಸೂಚಿಸಿದರು.

Scanned by CamScanner

೫. ಎಲ್ಲಾ ಶಾಖಾಧಿಕಾರಿಗಳಿಗೆ ತಮ್ಮ ಶಾಖೆಯಲ್ಲಿ Coverd Conductor ಹಾಗೂ ಯಾವುದಾದರು ಫೀಡರ್‌ಗೆ ಕಂಬಗಳನ್ನು ತೆಗೆದು UG cable ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲು ತಿಳಿಸಿದರು.

ಮುಂದುವರೆದು ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರಿಗೆ ದೂರವಾಣಿ ಮೂಲಕ ಅಥವಾ ಕಛೇರಿಗೆ ಬಂದು ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಸಂಖ್ಯೆ: ಸಕಾನಿಇಂ(ವಿ), ಸ.ಇಂ(ತಾಂ)/ಕುನ/ಉವಿ/ ದಿನಾಂಕ:

**ಪ್ರತಿಯನ್ನು,**

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ,
   ಕುವೆಂಪುನಗರ ಉಪವಿಭಾಗ, ಚಾವಿಸನಿನಿ.,ಮೈಸೂರು ರವರಿಗೆ.
   ಪ್ರ.ಕ.

Scanned by CamScanner